ಅಧ್ಯಕ್ಷರು.—ಇದು ಸಣ್ಣ ಡಿಪಾರ್ಟ್‌ಮೆಂಟ್. ಆ ರೀತಿ ಇದ್ದರೂ ಉತ್ತರ ತರಿಸಿಕೊಡುವುದಕ್ಕೆ ಆಗಲಿಲ್ಲ ಎಂದು ಹೇಳಿದರೆ ಹೇಗೆ ? You must pull up the officer. ಮಾನ್ಯ ಸ್ವಾಮಿರಾವ್ ರವರೇ, ತಾವು ಸಪ್ಲಿಮೆಂಟರಿ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಈ ದೇವಸ್ಥಾನ ಒಂದು ವಿಶಿಷ್ಟವಾದ ಹಾಗೂ ಒಂದು ವಿಶೇಷವಾದ ದೇವಸ್ಥಾನ ಕೂಡಾ ಆಗಿದೆ. ಹಿಂದೂಗಳು ಮತ್ತು ಮುಸ್ಲಿಮರು ಈ ಎರಡು ಜನಾಂಗದವರು ನೋಡಿಕೊಳ್ಳತಕ್ಕಂಥ ದೇವಸ್ಥಾನ ಇದಾಗಿದೆ. ಅನೇಕ ವರ್ಷಗಳಿಂದ ಇದರ ಲೆಕ್ಕಪತ್ರ ಹಾಗೂ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಸಾವಿರಾರು ಜನ ಬಂದು ಇಲ್ಲಿಗೆ ಹೋಗುತ್ತಿದ್ದರೂ ಕೂಡಾ ಇದರ ವ್ಯವಸ್ಥೆಯನ್ನು ಸರಿಯಾಗಿ ನೋಡುತ್ತಿಲ್ಲ. ಇದಕ್ಕೆ ವಕ್ಫ್ ಬೋರ್ಡ್‌ನಿಂದ ದುಡ್ಡು ಬಂದಿದೆ ಮತ್ತು ಮೆಜರಾಯಿ ಇಲಾಖೆ ಮತ್ತು ವಕ್ಫ್ ಬೋರ್ಡ್ ಇವೆರಡೂ ನೋಡಿಕೊಳ್ಳುತ್ತಿರುವುದರಿಂದ, ಇದು ಯಾವ ಇಲಾಖೆಗೆ ಸೇರಿದೆ ಎನ್ನುವುದೇ ಆರ್ಥವಾಗಿಲ್ಲ. ಒಂದು ವರ್ಷ ಆದಾಯ ಹೆಚ್ಚಿಗೆ ಬರೋತ್ತದೆ, ಒಂದು ವರ್ಷ ಆದಾಯ ಕಡಿಮೆ ಬರುತ್ತದೆ, ಇದರಿಂದ ಆದಾಯ ಎಲ್ಲಿಯಾದರೂ ಸೋರಿಹೋಗಿರಲೇಬೇಕು ಎಂದು ನನಗನ್ನಿಸುತ್ತದೆ. ಇದಕ್ಕೆ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಕೆ. ಅಮರನಾಥಶೆಟ್ಟಿ.—ಈ ದೇವಸ್ಥಾನದಲ್ಲಿ ಮುಸ್ಲಿಮರಿಗೆ ಇರುವಂಥ ದರ್ಗ ಕೂಡಾ ಇದೆ. ಇದು ಹಿಂದೂಗಳಿಗೆ ಬೇಕಾಗಿರುವಂಥ ದೇವಸ್ಥಾನ ಕೂಡಾ ಆಗಿದೆ. ಆ ಜಾಗದ ಬಗ್ಗೆ ನಾನೇ ಸ್ವತಃ ಪರಿಶೀಲನೆ ಮಾಡಿದ್ದೇನೆ. ಆ ಜಾಗವಲ್ಲಿ ಬಂದು ಉಳಿದುಕೊಳ್ಳುವವರಿಗೆ ಸರಿಯಾದ ಸವಲತ್ತು ಇಲ್ಲದೇ ಇರುವುದನ್ನು ಗಮನಿಸಿ ಅವರಿಗೆ ಬೇಕಾದ ಉಳಿದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಎಸ್ಟಿಮೇಟನ್ನು ಕೂಡಾ ತಯಾರು ಮಾಡಿ ಕಳುಹಿಸಲಿಕ್ಕೆ ಹೇಳಿದ್ದೇವೆ. ಎಸ್ಟಿಮೇಟ್ ಬಂದಿದೆ. ಆದಷ್ಟು ಬೇಗನೆ ಅವರಿಗೆ ಉಳಿದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತು ಇಲ್ಲಿಗೆ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ನನ್ನ ಜೊತೆಯಲ್ಲಿ ಇದ್ದ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಕೂಡಾ ಹೇಳಿದ್ದಾರೆ. ಈ ದೇವಸ್ಥಾನ ವಕ್ಫ್ ಮತ್ತು ಧಾರ್ಮಿಕದತ್ತಿಗೆ ಸಂಬಂಧಪಟ್ಟದೆಯೇ ಎಂದು ಹೇಳುವ ಬಗ್ಗೆ ಇದು ಸ್ವಲ್ಪ ಚರ್ಚೆಯಲ್ಲಿದೆ. ಇದು ಧಾರ್ಮಿಕ ಸಂಸ್ಥೆಗೆ ಬಂದು ಅಲ್ಲಿ ಕಡಿಮೆ ಆದಾಯ ಬಂದಿದೆ ಎಂಬ ಕಾರಣಕ್ಕಾಗಿ ಅಲ್ಲಿಗೆ ಈಗ ಅಡ್ಮಿನಿಸ್ಟ್ರೇಟರ್ ಒಬ್ಬರನ್ನು ಹಾಕಿದ್ದೇವೆ. ಈಗ ಅವರು ನೋಡಿಕೊಳ್ಳುತ್ತಿರುವುದರಿಂದ ಈಗ ಅಲ್ಲಿ ಒಳ್ಳೆಯ ಆದಾಯ ಬರುತ್ತಿದೆ. ಆದಷ್ಟು ಬೇಗನೆ ಈ ದೇವಸ್ಥಾನವನ್ನು ಉತ್ತಮಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಲ್ಲಿ ರಸ್ತೆ ಕೂಡ ಕೆಟ್ಟ ಸ್ಥಿತಿಯಲ್ಲಿದೆ. ಅದನ್ನು ಕೂಡಾ ಅಭಿವೃದ್ಧಿಪಡಿಸಬೇಕು.

ಶ್ರೀ ಕೆ. ಅಮರನಾಥಶೆಟ್ಟಿ.—ರಸ್ತೆ ತಪಾಗೆ ಸಂಬಂಧಪಟ್ಟಿಲ್ಲ. ಸಂಬಂಧಪಟ್ಟವರಿಗೆ ಅದರ ಬಗ್ಗೆ ತಿಳಿಸುತ್ತೇನೆ.

ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ನೇಮಕಾತಿಗಳು

೯೯೨ (೨೦೬೬) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಚಾಲ್ತಿ ರಿಜಿಸ್ಟರುಗಳಲ್ಲಿ ನೋಂದಾಯಿಸಿಕೊಂಡಿರತಕ್ಕ ನಿಪುಣ ಮತ್ತು ಅನಿಪುಣ ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಇವರುಗಳ ಪೈಕಿ ೧೯೮೫–೮೬ ೧೯೮೬–೮೭ ಮತ್ತು ೧೯೮೭ರ ಸಾಲಿನಲ್ಲಿ ಸಾರ್ವಜನಿಕ ಪಲಯದ ಉದ್ಯಮಸಂಸ್ಥೆಗಳಲ್ಲಿ ನೇಮಕಗೊಂಡವರ ಸಂಖ್ಯೆ ಎಷ್ಟು ?

ಇ) ಈ ಅವಧಿಯಲ್ಲಿ ಖಾಸಗಿ ಉದ್ಯಮಗಳಲ್ಲಿ ಆರೆ ಸರ್ಕಾರಿ ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ನೇಮಕಗೊಂಡವರ ಸಂಖ್ಯೆ ಎಷ್ಟು ?

ಈ) ನೇಮಕಗೊಂಡಿರುವ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳೆಷ್ಟು ?

ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ದಿನಾಂಕ ೩೧-೩-೮೮ ರಂದು ರಾಜ್ಯದ ಉದ್ಯೋಗವಿನಿಮಯ ಕೇಂದ್ರಗಳ ಪಾಲ್ಗೆ ದಾಖಲಾತಿಯಲ್ಲಿ ೨೭,೯೮೧ ನಿಪುಣ ಮತ್ತು ೩,೧೩,೭೪೮ ಅನಿಪುಣ ಕಾರ್ಮಿಕರಾಗಿ ನೋಂದಾಯಿಸಿಕೊಂಡಿದ್ದು ಉದ್ಯೋಗಾಕಾಂಕ್ಷಿಗಳಾಗಿದ್ದರು.

ಆ) ನೋಂದಣಿಯಾದ ನಿಪುಣ ಮತ್ತು ಅನಿಪುಣ ವ್ಯಕ್ತಿಗಳ ಪೈಕಿ ನೇಮಕವಾದವರ ಸಂಖ್ಯೆ ಬಗ್ಗೆ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲ. ಆದರೂ ಸಹ, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೇಮಕಗೊಂಡಿರುವ ಒಟ್ಟು ಅಭ್ಯರ್ಥಿಗಳ ವಿವರಗಳನ್ನು ಅನುಬಂಧ 'ಎ'ನಲ್ಲಿ ಕೊಡಲಾಗಿದೆ.

ಇ) ನಿರ್ದಿಷ್ಟವಾದ ಮಾಹಿತಿ ಲಭ್ಯವಿಲ್ಲ. ಆದರೂ ಸಹ ನೇಮಕಾತಿ ಬಗ್ಗೆ ಇರುವ ಮಾಹಿತಿಯನ್ನು (ಆ) ಪ್ರಶ್ನೆಯ ಉತ್ತರದ ಅನುಬಂಧ 'ಎ' ನಲ್ಲಿ ನೀಡಲಾಗಿದೆ.

ಈ) ಮೇಲೆ ಹೇಳಿರುವ ವೇರೆ ವೇರೆ ವರ್ಗಗಳಿಗೆ ನೇಮಕವಾಗಿರುವ ಅಭ್ಯರ್ಥಿಗಳ ಪೈಕಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳ ಒಟ್ಟು ಸಂಖ್ಯೆಯನ್ನು ಅನುಬಂಧ 'ಎ' ನಲ್ಲಿ ಕೊಡಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಷ್ಟು ಜನ ನೋಂದಾಯಿಸಿಕೊಂಡಿದ್ದಾರೆ. ನಿಪುಣರು ಮತ್ತು ಅನಿಪುಣರು ಅಂದರೆ ಸ್ಕಿಲ್ಡ್ ಮತ್ತು ಅನ್‌ಸ್ಕಿಲ್ಡ್, ಎಂದು ಕೇಳಿದ್ದಕ್ಕೆ ೨೭,೯೮೧ ನಿಪುಣರು ಮತ್ತು ೩,೧೩,೭೪೮ ಅನಿಪುಣರು ಇದ್ದಾರೆಂದು ಉತ್ತರ ಹೇಳಿದ್ದಾರೆ. ತರಬೇತಿ ಪಡೆದವರು ಹಾಗೂ ತರಬೇತಿ ಪಡೆಯದೇ ಇರುವವರೆಂದು ಹೇಳಿದರೆ ಸರಿಹೋಗುತ್ತದೆ ಎಂದು ಕಾಣುತ್ತದೆ. ಒಟ್ಟು ಸುಮಾರು ಮೂರುವರೆ ಲಕ್ಷ ಜನರಲ್ಲಿ ನೀವು ೩ ವರ್ಷದಲ್ಲಿ ನೇಮಕಾತಿ ಮಾಡಿರತಕ್ಕ ಒಟ್ಟು ಸಂಖ್ಯೆ ೩೦ ಸಾವಿರ, ಅಂದರೆ ನಿಮ್ಮ ಸರ್ಕಾರದ ನೀತಿ ಪ್ರಕಾರ ಒಂದು ವರ್ಷದಲ್ಲಿ ೭ ಸಾವಿರ, ೮ ಸಾವಿರ ನೇಮಕಾತಿ ಮಾಡುತ್ತಾ ಹೋದರೆ ಇಲ್ಲಿ ಏನು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಜನರು ನೋಂದಾಯಿಸಿಕೊಂಡಿದ್ದಾರೆ ಆ ಜನರು ಉದ್ಯೋಗ ಪಡೆಯಲು ಎಷ್ಟು ವರ್ಷಗಳನ್ನು ಕಾಯಬೇಕಾಗುತ್ತದೆ ? ಎರಡನೆಯದಾಗಿ, ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ನೇಮಕಾತಿ ಗೊಂಡವರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ, ಹಾಗಾದರೆ ನಿಮ್ಮ ಇಲಾಖೆ ಏನು ಕೆಲಸ ಮಾಡುತ್ತಿದೆ ಎನ್ನುವುದು ನನ್ನ ಪ್ರಶ್ನೆ. ಯಾವ ಯಾವ ಸಂಸ್ಥೆಗಳಲ್ಲಿ ಸರ್ಕಾರ ನಡೆಸತಕ್ಕದ್ದು, ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರದಿಂದ ಆರ್ಥಿಕ ನೆರವನ್ನು ಪಡೆದುಕೊಳ್ಳತಕ್ಕ ಸಂಸ್ಥೆಗಳು, ಇದರಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ, ನೇಮಕಾತಿಯ ಅಂಕಿ ಸಂಖ್ಯೆಗಳನ್ನು ಕೊಡದೇ ಹೋದರೆ ಈ ಇಲಾಖೆ ಕಾಂತಾ ಅವರದ್ದು ಏನು ಇದೆ, ನಿಜವಾಗಿ ಅರ್ಥ ಗರ್ಭಿತವಾಗಿ ಅರ್ಥ ಬರುವ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬ ಪ್ರಶ್ನೆ ಬರುತ್ತದೆ. ಪಯಣವಿಟ್ಟು ಇದಕ್ಕೆ ಉತ್ತರ ಕೊಡಲೇಬೇಕು. ಖಾಸಗಿ ಉದ್ಯಮಗಳಲ್ಲಿ, ಅರೆ ಸರ್ಕಾರಿ ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳಲ್ಲಿ ನೇಮಕಾತಿ ಬಗ್ಗೆ ನಿರ್ದಿಷ್ಟವಾದ ಉತ್ತರ, ಮಾಹಿತಿ ಇಲ್ಲ ಎಂದು ಹೇಳುವುದಾದರೆ, ಈ ಅಂಕಿ ಅಂಶಗಳನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ? ನೋಂದಾಯಿಸಿಕೊಂಡಿರುವವರಲ್ಲಿ ನಿಪುಣರು ಮತ್ತು ಅನಿಪುಣರು ಎಷ್ಟು ವ್ಯಕ್ತಿಗಳು ನೇಮಕವಾಗಿದ್ದಾರೆ ಎಂಬ ಪ್ರಶ್ನೆಗೆ ಮಾಹಿತಿ ಲಭ್ಯ ಇಲ್ಲ ಎಂದು ಹೇಳಿದ್ದಾರೆ. ಹಾಗಾದರೆ ನಿಪುಣರು ಮತ್ತು ಅನಿಪುಣರು ಯಾವ ಕ್ಯಾಟಗೋರಿಯಲ್ಲಿ ಬರುತ್ತಾರೆ ಎಂಬ ಬಗ್ಗೆ ವಿವರವನ್ನು ಒದಗಿಸಿಲ್ಲ. ಈ ವಿವರವನ್ನು ಒದಗಿಸುತ್ತೀರಾ ?

ಶ್ರೀ ಎಸ್.ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಕೇಳಿರತಕ್ಕ ಪ್ರಶ್ನೆ, ೩,೧೩,೭೪೮ ಅನಿಪುಣರಲ್ಲಿ ಅಂದರೆ ಅನ್‌ಸ್ಕಿಲ್ಡ್ ಅವರು ಎಸ್.ಎಸ್.ಎಲ್.ಸಿ, ಕೆಳಗಡೆ ಓದಿರತಕ್ಕಂಥ ಜನ ಮತ್ತು ಮೇಲೆ ಹೇಳಿರತಕ್ಕ ೨೭,೯೮೧ ಜನ ಐಟಿಐ ಮತ್ತು ಅಪ್ರೆಂಟೈಸ್‌ಶಿಪ್ ಟ್ರೈನಿಂಗ್ ಪಡೆದಿರತಕ್ಕ ಜನ, ಈ ಒಂದು ಮಾಹಿತಿಯನ್ನು ಈಗಾಗಲೇ ಕೊಟ್ಟಿದ್ದೇನೆ. ಇವರುಗಳು ಎಷ್ಟು ದಿವಸ ಗಳವರೆಗೆ ಉದ್ಯೋಗಕ್ಕೆ ಕಾಯಬೇಕು ಎಂಬ ಪ್ರಶ್ನೆ ಕೇಳಿದ್ದಾರೆ. ೧೯೮೭ನೇ ಡಿಸೆಂಬರ್ ಪ್ರಕಾರ ೧೦ ಲಕ್ಷ ಜನ ಇದ್ದರು, ಈಗ ಸುಮಾರು ೯ ಲಕ್ಷ ೯೦ ಸಾವಿರ ಜನ ಇದ್ದಾರೆ, ಮತ್ತು ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ವಿಷಯದಲ್ಲಿ ಡೈರೆಕ್ಟರ್ ಜನರಲ್, ಗವರ್ನ್‌ಮೆಂಟ್ ಆಫ್ ಇಂಡಿಯಾ ಹೇಳಿರುವ ಪ್ರಕಾರ ಯಾವ ಯಾವ ವಿಷಯಗಳಲ್ಲಿ ಪಟ್ಟಿ ಇಡಬೇಕೋ ಅದರ ಆಧಾರದ ಮೇಲೆ ಈ ಒಂದು ವಿಚಾರವನ್ನು ಮಾಡುತ್ತೇವೆ.

ANNEXURE-A

Sl.No.		1985			1986			1987		
		Total	SC	ST	Total	SC	ST	Total	SC	ST
1	State Government	7,094	1,474	323	4,292	929	210	3,324	714	169
2	Central Government	2,417	518	75	1,515	325	70	1,555	292	75
3	State Undertakings	1,727	250	31	900	251	60	407	90	15
4	Central Undertakings	2,574	584	117	2,515	406	58	2,507	351	61
5	Local Bodies	457	246	6	205	116	3	180	65	7
6	Private Establishments	577	28	15	243	58	19	342	43	21
	Total	14,846	3,100	567	9,670	2,085	420	8,315	1,555	348

ಇದು ಬೇರೆ ಬೇರೆ ಅಂಕಿಅಂಶಗಳನ್ನು ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯಸರ್ಕಾರಕ್ಕೂ ಒದಗಿಸ ಬೇಕಾಗುತ್ತದೆ. ಈ ಇಲಾಖೆಯ ಮುಖ್ಯ ಕೆಲಸವೆಂದರೆ, ೧೪ ವರ್ಷಗಳಿಂದ ಹಿಡಿದು ೬೦ ವರ್ಷಗಳವರೆಗೆ ಯಾರಾದರು ಬಂದು ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕೆಲಸಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕೆಂದು ಕೇಳಿಕೊಂಡರೆ ನಾವು ಅವರ ಹೆಸರನ್ನು ನೋಂದಾಯಿಸಬೇಕಾಗುತ್ತದೆ. ಇದು ಈ ಇಲಾಖೆಯ ಕೆಲಸ. ಇದರ ಪ್ರಕಾರ ನಾವು ಕೆಲಸ ಮಾಡುತ್ತಿದ್ದೇವೆ. ಬೇರೆ ಬೇರೆ ಇಲಾಖೆಯವರು ತಮ್ಮಲ್ಲಿ ಕೆಲಸ ಮಾಡಲು ಇಷ್ಟು ಜನರು ಬೇಕು ಎಂದು ನಮ್ಮಲ್ಲಿ ಬಂದು ಕೇಳಿದಾಗ ನಾವು ಅವರಿಗೆ ಸೂಕ್ತ ಮಾಹಿತಿ ಗಳನ್ನು ಒದಗಿಸುತ್ತೇವೆ. ಈಗ ಖಾಸಗಿ ವಲಯದವರು ಸಹ ನಮ್ಮ ಕಡೆಯಿಂದ ಅವರಲ್ಲಿ ಕೆಲಸ ಮಾಡಲು ನಮ್ಮ ಕಡೆಯಿಂದ ಹೆಸರುಗಳನ್ನು ತರಿಸಿಕೊಂಡು ಕೆಲಸ ಕೊಡುತ್ತಿದ್ದಾರೆ. ಖಾಸಗಿ ವಲಯ ದವರು ಏತಕ್ಕೆ ನಮ್ಮ ಕಡೆ ಬರುತ್ತಿದ್ದಾರೆಂದರೆ, ''ನಮ್ಮಲ್ಲಿ ವಿವರಗಳನ್ನು ಪಡೆದುಕೊಂಡರೆ ಅವರು ಪ್ರತ್ಯೇಕವಾಗಿ ಜಾಹೀರಾತು ಕೊಡುವಂತಹ ಅವಶ್ಯಕತೆ ಬರುವುದಿಲ್ಲ. ಆದ್ದರಿಂದ ಅವರಿಗೆ ಕುಶಲ ಮತ್ತು ಅಕುಶಲಗಳು ಬೇಕಾದರೆ ನಮ್ಮ ಕಡೆಯಿಂದ ತೆಗೆದುಕೊಳ್ಳುತ್ತಿದ್ದಾರೆ''. ಇದು ಅವರ ಮೊದಲನೆಯ ಪ್ರಶ್ನೆಗೆ ಉತ್ತರ. ಮತ್ತೆ ಅವರು ಎರಡನೇ ಪ್ರಶ್ನೆ ಏನು ಕೇಳಿದ್ದಾರೆಂದರೆ, '' ರಾಜ್ಯ ಸರ್ಕಾರ, ಕೇಂದ್ರಸರ್ಕಾರ ಹಾಗೂ ಸಾರ್ವಜನಿಕ ವಲಯದ ಉದ್ಯಮಸಂಸ್ಥೆಗಳಲ್ಲಿ ನಿಪುಣ ಮತ್ತು ಅನಿಪುಣರು ನೇಮಕಗೊಂಡು ಕೆಲಸ ಮಾಡುತ್ತಿರುವ ಬಗ್ಗೆ ವಿವರಗಳನ್ನು ಇಟ್ಟಿದ್ದೀರಿ, ಆದರೆ ಖಾಸಗಿ ಉದ್ಯಮಗಳಲ್ಲಿ, ಆರೆ ಸರ್ಕಾರಿ ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳಲ್ಲಿ ಹಾಗೂ ಬ್ಯಾಂಕ್ ಗಳಲ್ಲಿ ನೇಮಕಗೊಂಡವರ ವಿವರಗಳನ್ನು ಏತಕ್ಕೆ ಇಟ್ಟಿಲ್ಲವೆಂದು ಕೇಳಿದ್ದಾರೆ''. ಇನ್ನು ಮುಂದೆ ಈ ಕ್ಷೇತ್ರಗಳವರು ಯಾವಯಾವ ಸಂದರ್ಭಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ಹೆಸರುಗಳನ್ನು ತರಿಸಿಕೊಂಡು ನೇಮಕ ಮಾಡಿಕೊಂಡಿದ್ದಾರೆಂಬ ಬಗ್ಗೆ ವಿವರಗಳನ್ನಿಡಬೇಕೆಂದು ನಾನು ನಮ್ಮ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ.

ಶ್ರೀ ಬಿ. ಬಸಪಲಿಂಗಪ್ಪ.—೧೯೮೫ರಿಂದ ಈ ತಹಲ್ಲೂರಿಗೆ ೩೦ ಸಾವಿರ ಜನರಿಗೆ ಕೆಲಸ ಸಿಕ್ಕಿದೆ ಎಂದು ಹೇಳಿದ್ದೀರಿ. ಇದರಲ್ಲಿ ನಿಪುಣರೆಷ್ಟು ಮತ್ತು ಅನಿಪುಣರೆಷ್ಟು ಎಂಬ ವಿವರವನ್ನು ಕೊಟ್ಟಿಲ್ಲ. ಕೆಲಸ ಸಿಗಬೇಕಾದರೆ ನಿಪುಣರು ಎಷ್ಟು ಸಮಯದವರೆಗೆ ನಿಮ್ಮಲ್ಲಿ ಕಾಯಬೇಕಾಗುತ್ತದೆ? ಇದನ್ನು ನಾನು ಏತಕ್ಕೆ ಒತ್ತಾಯ ಮಾಡಿ ಕೇಳುತ್ತಿದ್ದೇನೆಂದರೆ, ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮನೆಗೊಂದು ಕೆಲಸ ಕೊಡುತ್ತೇವೆಂದು ಹೇಳಿದ್ದರು. ಆದ್ದರಿಂದ ಈ ನಿಪುಣರಿಗೆ, ತರಬೇತಿ ಪಡೆದವರಿಗೆ, '' ಪದವೀಧರರಾದವರಿಗೆ ಕೆಲಸ ಕೊಡಲು ಒಂದು ಕಾಲದ ನಿಗದಿಯನ್ನು ಏನಾದರು ಮಾಡಿದ್ದೀರಾ? ಇಂತಹವರು ಕೆಲಸಕ್ಕಾಗಿ ಎಷ್ಟು ಸಮಯದವರೆಗೆ ಕಾಯಬೇಕು? ನೀವು ಈ ಬಗ್ಗೆ ಹೇಳತಕ್ಕಂಥ ನೀತಿ ಒಂದಾವರೆ ಮಾಡತಕ್ಕಂಥ ನೀತಿ ಮತ್ತೊಂದು ಆಗಿದೆ. ಇವೆರಡರ ನಡುವೆ ಬಹಳ ಅಂತರವಿದೆ. ಈಗ ಕೆಲಸಬೇಕೆಂದು ನಿಮ್ಮಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿದ್ದಾರೆ'', ಅವರಿಗೆಲ್ಲಾ ಕೆಲಸ ಕೊಡಿಸಲು ಏನೇನು ಪ್ರಯತ್ನ ಮಾಡುತ್ತಿದ್ದೀರೆಂಬುದನ್ನು ತಾವು ತಿಳಿಸಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಕೇಳಿದ್ದಾರೆ.

ಶ್ರೀ ಬಿ. ಬಸಪಲಿಂಗಪ್ಪ.—ನನ್ನ ಪ್ರಶ್ನೆಗೆ ಇವರು ಏತಕ್ಕೆ ಉತ್ತರ ಕೊಡಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಕ್ವೆಶ್ಚನ್ ಇದ್ದರೆ ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಯಾವ ಮಂತ್ರಿ ಬೇಕಾದರೂ ಉತ್ತರ ಕೊಡಬಹುದು. ಈಗ ನಮ್ಮ ರಾಷ್ಟ್ರದಲ್ಲಿ ಳ ಕೋಟಿ ಯಷ್ಟು ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ. ಇವರಿಗೆಲ್ಲಾ ಕೆಲಸ ಕೊಡಲು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರಗಳು ಪ್ರಯತ್ನ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಕಾರ್ಮಿಕ ಇಲಾಖೆಯ ಕರ್ತವ್ಯವೇನೆಂಬುದನ್ನು ಮಾನ್ಯ ಸಚಿವರು ಹೇಳಿದ್ದಾರೆ. ಕೆಲಸ ಬೇಕೆಂದು ಯಾರುಯಾರು ಉದ್ಯೋಗ ವಿನಿಮಯ ಕೇಂದ್ರಗಳಿಗೆ ಬಂದು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೋ, '' ಅಂತಹವರ ಹೆಸರುಗಳನ್ನು ಬೇರೆಬೇರೆ ಸಂಸ್ಥೆಗಳಿಂದ ಬೇಡಿಕೆ ಬಂದಾಗ ಕಳುಹಿಸಿಕೊಡುವುದು ಈ ಇಲಾಖೆಯ ಕೆಲಸವಾಗಿದೆ. ಕೆಲಸ ಕೊಡುವುದು ಈ ಇಲಾಖೆಯ ಕೆಲಸವಲ್ಲ. ಮನೆಗೊಂದು ಕೆಲಸ ಕೊಡುತ್ತೇವೆಂದು ಹೇಳಿದ್ದೀರಿ'', ಆದು ಏನಾಯಿತು ಎಂದು ಕೇಳಿದ್ದಾರೆ. ಕೇವಲ ಸರ್ಕಾರಿ ವಲಯದಲ್ಲಿಯೇ ಎಲ್ಲರಿಗೂ ಕೆಲಸ ಕೊಡುವುದಕ್ಕಾಗುವುದಿಲ್ಲ. ಖಾಸಗಿ ವಲಯದಲ್ಲಿ, '' ಕೃಷಿ ವಲಯದಲ್ಲಿ ಸಹ ಕೆಲಸ ಕೊಡಬೇಕಾಗುತ್ತದೆ. ನಮ್ಮಲ್ಲಿ ಕೃಷಿ ಕಾರ್ಮಿಕರಿದ್ದಾರೆ'', ನೇಕಾರರು ಇದ್ದಾರೆ ಹಾಗೂ ಇನ್ನೂ ಬೇರೆಬೇರೆ ಕೆಲಸ ಮಾಡುವಂತಹ ಜನರು ಇದ್ದಾರೆ. ಇವರಿಗೆಲ್ಲಾ ವಿಶೇಷ ವಾಗಿ ಕೆಲಸ ಕೊಡುವಂತಹ ಯೋಜನೆಗಳು ಇವೆ.

ಶ್ರೀ ಬಿ. ಬಸವಲಿಂಗಪ್ಪ.—ಅವರನ್ನು ರಕ್ಷಣೆ ಮಾಡುವುದಲ್ಲ. ಶ್ರೀಮಾನ್ ಬೊಮ್ಮಾಯಿ ಯವರೇ ಪ್ರತಿಯೊಂದು ಮನೆಗೂ ಒಂದೊಂದು ಕೆಲಸ ಕೊಡುತ್ತೇವೆ ಎಂದು ಹೇಳಿದ್ದೀರಲ್ಲಾ, ನೀವು ಹೇಳಿದ್ದು, ನಾವು ಏನೂ ಹೇಳಲಿಲ್ಲ. ಈ ಸರ್ಕಾರ ಬಂದಮೇಲೆ ಹೇಳಿದ್ದಾರೆ. ಅವರ ಅರ್ಥ ಏನು ? ಪ್ರತಿಯೊಂದು ಮನೆಗೂ ಅವರು ಏನು ಉದ್ಯೋಗ ಮಾಡುತ್ತಾರೆ ಅದೇ ಉದ್ಯೋಗ ಕೊಡಿಸುತ್ತೇವೆ ಅಂದರೆ, ಅವರು ಮಾಡುತ್ತಾ ಇದ್ದಾರೆ. ಉದ್ಯೋಗ ಇಲ್ಲದೇ ಯಾರೂ ಇಲ್ಲವೇ ಇಲ್ಲ. ದನ ಕಾಯುವವನು ದನ ಕಾಯ್ದೇ ಕಾಯುತ್ತಾನೆ, ಕೋಳಿ ಸಾಕುವವನು ಕೋಳಿ ಸಾಕುತ್ತಾನೆ, ಆಮೇಲೆ ಹೊಲ ಮಾಡುವವನು ಹೊಲ ಮಾಡೇ ಮಾಡುತ್ತಾನೆ. ಜನತಾ ಪಾರ್ಟಿ ಬಂದಮೇಲೆ ನಾವು ಪ್ರತಿಯೊಬ್ಬರಿಗೂ ಉದ್ಯೋಗ ಕೋಟಿದ್ದೇವೆ ಎಂದು ಶಹಭಾಸಗಿರಿ ಪಡೆದುಕೊಳ್ಳತಕ್ಕಂಥಾದ್ದು ಎಂತಹ ಸಣ್ಣತನ ಇದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದು ಆರೀತಿ ಅಲ್ಲ. ಬರೀ ಸರ್ಕಾರಿ ವಲಯದಲ್ಲಿ ಅಲ್ಲ, ಖಾಸಗಿ ವಲಯದಲ್ಲೂ ನಾವು ಮಾಡಿದ್ದೇವೆ. ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರೀಸ್ ಎಂದು ಹೇಳಿದ್ದೇವೆ. ಈಗ ಅದು ಚಾರಿಯಲ್ಲಿ ಬಂದಿದೆ. ಸುಮಾರು ೯೦ ಪರ್ಸೆಂಟ್ ಖಾಸಗಿ ವಲಯದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಿಂದ ಬಂದರೂ ಅದೂ ಉದ್ಯೋಗ.

ಶ್ರೀ ಆರ್. ವೆಂಟರಾವಮಯ್ಯ.—ಆರೀತಿಯಾದರೂ ಅನಲೈಸ್‌ಮಾಡಿ ನೀವು ಕೊಟ್ಟಿದ್ದೀರಾ ಮನೆಗೆ ಒಂದು ಉದ್ಯೋಗ ಕೊಡಿಸುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದೀರಿ, ಖಾಸಗಿ ವಲಯದಲ್ಲಾಗಲಿ, ಸರ್ಕಾರದ ಕ್ಷೇತ್ರದಲ್ಲಾಗಲಿ ಒಬ್ಬೊಬ್ಬರಿಗೆ ಉದ್ಯೋಗ ಕೊಡಿಸುವ ಪ್ರಯತ್ನವಿದೆ, ಇದರಲ್ಲಿ ಎಷ್ಟು ಜನರಿಗೆ ಕೊಡಿಸಿದ್ದೀರಿ ? ಇಲ್ಲವೇ ಇದು ಸುಮ್ಮನೆ ಪ್ರಣಾಳಿಕೆಯಲ್ಲಿ ಘೋಷಣೆಯಾಗಿ ಉಳಿದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಡಿಸಿದ್ದೇವೆ, ಅದರ ಅಂಕಿಸಂಖ್ಯೆಯನ್ನು ಬೇರೆ ಪ್ರಶ್ನೆ ಕೇಳಿದರೆ ಉತ್ತರದಲ್ಲಿ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾವಮಯ್ಯ.—ತಪ್ಪಿಸುವ ಪ್ರಯತ್ನ ಬೇಡ, ಸ್ಪಷ್ಟವಾಗಿ ಹೇಳಿ.

ಶ್ರೀ ಎಸ್. ಕೆ. ಕಾಂತ.—ಈ ಇಲಾಖೆಗೆ ಬರತಕ್ಕಂಥ ಕೆಲಸ ಏನಿದೆ ಅಂದರೆ ಇಲ್ಲಿ ನೋಂದಾಯಿಸತಕ್ಕಂಥ ಜನರೆಲ್ಲರೂ ನೌಕರಿಯಲ್ಲಿ ಇಲ್ಲ ಎಂದಲ್ಲ, ಅವರು ಬೇರೆ ಬೇರೆ ಕಡೆ ನೌಕರಿ ಮಾಡುತ್ತಾರೆ. ನೀವು ಅದನ್ನು ತಪ್ಪು ತಿಳಿದುಕೊಂಡಿದ್ದೀರಿ, ಅದು ಬಹಳ ತಪ್ಪು. ಅವರು ಇಲ್ಲಿ ನೋಂದಾಯಿಸಿ ಕೆಲವು ಕಡೆ ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲೇ ಬರಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೆಲವರು ಮಾಡಿರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಭಾಷಣ ಮಾಡುವುದಕ್ಕೆ ನಿಂತುಕೊಂಡಿಲ್ಲ, ನಾನು ನಿಮಗೆ ಪರವಾನಿಗೆ ಕೊಡುವುದಿಲ್ಲ. ನಾನು ಪ್ರಶ್ನೆ ಕೊಟ್ಟಿದ್ದೇನೆ, ಉತ್ತರ ಹೇಳಬೇಕು. ನಿಮ್ಮ ಇಲಾಖೆ ಏನು ಕೆಲಸ ಮಾಡುತ್ತಿದೆ. ಅಂಕಿಅಂಶಗಳು ನಮ್ಮ ಹತ್ತಿರ ಇಲ್ಲ ಎಂದು ಹೇಳುತ್ತಿದ್ದೀರಲ್ಲಾ ಈಗ ನಿಮ್ಮ ಇಲಾಖೆಯಿಂದ ಮಾಡಿಸಬೇಕು ಅಂಕಿಅಂಶ ಇಲ್ಲ ಎಂದು ಹೇಳುತ್ತಿದ್ದೀರಿ ದಯವಿಟ್ಟು ನೀವು ಕೂಲಾಗಿ ತಿಳಿದುಕೊಳ್ಳಿ, ಶಾಂತವಾಗಿ ತಿಳಿದುಕೊಳ್ಳಿ, ನಿಮ್ಮ ಇಲಾಖೆಯನ್ನು ಚುರುಕುಗೊಳಿಸುವುದಕ್ಕೋಸ್ಕರ ಈ ಪ್ರಶ್ನೆಯನ್ನು ಕೊಟ್ಟಿದ್ದೇನೆ. ನೀವು ಹೊಸದಾಗಿ ಬಂದಿದ್ದೀರಿ ಪಾಪ. ಈ ಇಲಾಖೆ ಬಹಳ ವರ್ಷಗಳಿಂದ ಬಿದ್ದುಹೋಗಿದೆ. ಈ ಇಲಾಖೆ ಕೆಲಸ ಮಾಡುವುದಿಲ್ಲ. ಅದಕ್ಕೆ ಈ ಒಂದು ವ್ಯವಸ್ಥೆ ಇದೆಯೆಲ್ಲ. ಕೆಲಸ ಕೊಡಿಸಿತಕ್ಕಂಥಾದ್ದು, ನೋಂದಾಯಿಸಿಕೊಳ್ಳತಕ್ಕಂಥಾದ್ದು, ಕೆಲಸ ಕೊಡಿಸಿದ ಮೇಲೆ ಬಿಟ್ಟು ಹೋಗತಕ್ಕಂಥಾದ್ದು, ಇದು ಯಾರು ಇಲ್ಲ ಎಂದು ಅಲ್ಲ. ಅದನ್ನು ನಾನು ಪ್ರಶ್ನೆ ಕೇಳುವುದಿಲ್ಲ.

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೇ, ಅವರು ಹೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಕೆಲವು ವಿಷಯಗಳಲ್ಲಿ ಅರೆ ಸರ್ಕಾರ ಮತ್ತು ಫೈನಾನ್ಸ್ ಕಾರ್ಪೋರೇಷನ್ಸ್‌ಗಳಾಗಲಿ, ಬ್ಯಾಂಕ್ಸ್‌ನಲ್ಲಾಗಲಿ ಉದ್ಯೋಗ ಪಡೆದಿರತಕ್ಕವರ ಸಂಖ್ಯೆ ಎಷ್ಟು ಎಂದು ಕೇಳಿದಾಗ ಆ ವಿಷಯ ಇಲ್ಲಿ ಲಭ್ಯವಿಲ್ಲ ಎಂದು ಹೇಳಿದೆ. ಮುಂದೆ ನಾನು ಆದೇಶ ನೀಡುತ್ತಾ ಇದ್ದೇನೆ. ಸರ್ಕಾರಿ ಕ್ಷೇತ್ರದಲ್ಲಿ ಈಗಾಗಲೇ ಇದೆ. ಗವರ್ನಮೆಂಟ್ ಅಂಡರ್‌ಟೇಕಿಂಗ್ಸ್, ಪಬ್ಲಿಕ್ ಅಂಡರ್ ಟೇಕಿಂಗ್ಸ್, ಪ್ರೈವೇಟ್ ಅಂಡರ್‌ಟೇಕಿಂಗ್ಸ್‌ನಲ್ಲಿ ಯಾರ್ಯಾರು ಉದ್ಯೋಗ ಪಡೆದಿದ್ದಾರೆ ಅವರ ಸಂಖ್ಯೆ ಇದೆ. ಆದರೆ ಫೈನಾನ್ಸ್ ಕಾರ್ಪೋರೇಷನ್‌ನಲ್ಲಿ

ಬ್ಯಾಂಕುಗಳಲ್ಲಿ ಎಷ್ಟು ಜನರಿಗೆ ಅಪಾಯಿಂಟ್‌ಮೆಂಟ್ ಆಗಿದೆ ಎನ್ನುತಕ್ಕಂಥಾದ್ದು ಲಭ್ಯವಿಲ್ಲ ಎಂದು ಹೇಳಿದ್ದೇನೆ. ಆದೇಶ ಕೊಡುತ್ತಾ ಇದ್ದೇನೆ. ಈ ಅಂಕಿಸಂಖ್ಯೆಗಳನ್ನೂ ಕೂಡ ನೋಂದಾಪಣೆ ಮಾಡ ಬೇಕು ಎಂದು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಮಾಡುತ್ತೇನೆ. ಆಮೇಲೆ ಉದ್ಯೋಗಾವಕಾಶ ಕೊಡಬೇಕು ಎಂದು ಜನರಲ್ಲಾಗಿ ಕೇಳುತ್ತಿದ್ದಾರೆ. ಅದು ಈ ಇಲಾಖೆಗೆ ಸಂಬಂಧವಿಲ್ಲತಕ್ಕಂಥ ಪ್ರಶ್ನೆ ಎಂದು ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ಆದಕ್ಕೋಸ್ಕರ ನಾನು ಹೇಳಿದೆ, ಇದರಲ್ಲಿ, ಎಲ್ಲರೂ ಕೆಲಸವಿಲ್ಲದೆ ಇಲ್ಲ ಎಂದು.

ಆಡಳಿತ ಮಂಡಳಿಗಳ ವಜಾ

೮೯೩ (೨೭೬೫) ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಒಟ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ವಜಾ ಮಾಡಲಾಗಿರುವ ಆಡಳಿತ ಮಂಡಳಿಗಳ ಸಂಖ್ಯೆ ಎಷ್ಟು ? ಅದಕ್ಕೆ ಕಾರಣಗಳೇನು? (ವಿವರ ನೀಡುವುದು)

ಇ) ಇದೇ ರೀತಿಯ ಆಡಳಿತ ಮಂಡಳಿಯು ರದ್ದಾಗಿದ್ದು ರಾಯಭಾಗ ಕಾರ್ಖಾನೆಯನ್ನು ರಾಜ್ಯ ಸಭಾ ಚುನಾವಣೆಯ ಸಂದರ್ಭದಲ್ಲಿ ಆದ ರದ್ದತಿಯನ್ನು ಹಿಂದಕ್ಕೆ ಪಡೆದಿರುವುದು ನಿಜವೇ ?

ಈ) ಹಾಗಿದ್ದಲ್ಲಿ ೭೦ ಲಕ್ಷ ಲಾಭ ಪಡೆದಿರುವ ಭದ್ರಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ಮುಂದುವರಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಆರ್. ಬಿ. ಪೋತದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮ ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದು ಇವುಗಳ ಪೈಕಿ ೧೪ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ರಾಜ್ಯದಲ್ಲಿರುವ ೧೮ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ಈ ಕೆಳಕಂಡ ಮೂರು ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸುವುದರ ಮೂಲಕ ಆಡಳಿತವನ್ನು ಸರ್ಕಾರ ವಹಿಸಿಕೊಂಡಿರುತ್ತೆ.

೧) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ.

೨) ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ.

೩) ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ.

ಮೇಲ್ಕಾಣಿಸಿದ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯನ್ನು ವಹಿಸಿಕೊಂಡಿದಕ್ಕೆ ಕಾರಣ ಈ ಕೆಳಕಂಡಂತೆ ಇವೆ:

೧) ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ:

ಕಾರ್ಖಾನೆಯು ೧೯೮೪-೮೫ ಮತ್ತು ೧೯೮೫-೮೬ನೇ ಆಡಿಟ್ ವರದಿಯಲ್ಲಿ ಕಾರ್ಖಾನೆಯ ಆಡಳಿತ ವೈಖರಿ ಬಗ್ಗೆ ಹಲವಾರು ನ್ಯೂನತೆಗಳನ್ನು ಕಂಡುಹಿಡಿಯಲಾಗಿದೆ.

೨) ಕಾರ್ಖಾನೆಯ ಆಡಳಿತ ಮಂಡಳಿಯ ಮೇಲೆ ೨೩ ಆರೋಪಗಳಿದ್ದು ಇವರ ಬಗ್ಗೆ ಆಡಳಿತ ಮಂಡಳಿಗೆ ಒಂದು ಷೋಕಾಷ್ ನೋಟೀಸ್ ನೀಡಲಾಗಿದೆ. ಆಡಳಿತ ಮಂಡಳಿಯು ಸದರಿ ಷೋಕಾಷ್ ನೋಟೀಸಿಗೆ ನೀಡಿದ ಉತ್ತರವನ್ನು ಪರೀಕ್ಷಿಸಲಾಗಿ ಆರೋಪಗಳು ಬಹಳ ತೀವ್ರ ಸ್ವರೂಪದಾಗಿದ್ದರಿಂದ ಸಮಾಯೋಚಿತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿ ಕೊಳ್ಳಲಾಯಿತು.

೩) ಆಡಳಿತ ಮಂಡಳಿಯವರ ಕೋರಿಕೆ ಮೇರೆಗೆ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯನ್ನು ವಿಶೇಷ ಅಧಿಕಾರಿಯು ನೇಮಕ ಮಾಡುವುದರ ಮೂಲಕ ಸರ್ಕಾರ ತೆಗೆದುಕೊಂಡಿದೆ.